**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ವರ್ಗ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಗುಂಡ್ಲುಪೇಟೆ**

**ಸಿ ಸಿ ನಂ. 481/2025**

ಫಿರ್ಯಾದುದಾರರು ಸರ್ಕಾರದ ಪರವಾಗಿ ಗುಂಡ್ಲುಪೇಟೆ ಪೋ. ಠಾಣೆ

ವಿರುದ್ಧ

ಆರೋಪಿಗಳು
1. ಮೋಹನ್ ಜಿ.ಎನ್ ಬಿನ್ ನಾಗರಾಜನಾಯಕ, 25 ವರ್ಷ,
ವಾಸಃ ಕುರುಬಗೌಡರ ಬೀದಿ,
ಗುಂಡ್ಲುಪೇಟೆ ಟೌನ್,
2. ಸಂತೋಷ @ ಸಂತು ಬಿನ್ ಲೇಟ್ ಕುಮಾರನಾಯಕ, 32 ವರ್ಷ,
ವಾಸಃ 11ನೇ ವಾರ್ಡ್, ನಾಯಕರ ಬೀದಿ,
ಗುಂಡ್ಲುಪೇಟೆ ಟೌನ್.

**ದೋಷಾರೋಪಣೆ**

ಶ್ರೀ ಬಸವರಾಜ ತಳವಾರ, ಬಿ.ಎ., ಎಲ್ ಎಲ್ ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ ಗಳು ಗುಂಡ್ಲುಪೇಟೆ ಆದ ನಾನು ಆರೋಪಿಗಳಾದ ನಿಮ್ಮನ್ನು ಈ ಕೆಳಕಂಡ ಆಪಾದನೆಗಳಿಗೆ ಗುರಿಪಡಿಸುತ್ತೇನೆ.

ದಿಃ 17.01.2025 ರಂದು ರಾತ್ರಿ ಸು. 10.15 ಗಂಟೆ ಸಮಯದಲ್ಲಿ ಚಾಸಾ-1 ಮಹದೇವಮೂರ್ತಿ.ಸಿ, ಸಿಪಿಸಿ 200 ಮತ್ತು ಚಾಸಾ-2 ಕೃಷ್ಣ, ಸಿಪಿಸಿ 459 ರವರಿಗೆ ಚಾಸಾ-12 ಮನುರಾಜು, ಸಿಪಿಸಿ 121 ರವರು ಗುಂಡ್ಲುಪೇಟೆ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಗುಂಡ್ಲುಪೇಟೆ ಪಟ್ಟಣದ ಗುಂಡ್ಲುಪೇಟೆ ಊಟಿ ಮುಖ್ಯ ರಸ್ತೆಯಲ್ಲಿ ಬರುವ ಅನುಪಮ ಬಾರ್ ಮತ್ತು ರೆಸ್ಟೋರೆಂಟ್ ಮುಂಭಾಗ ಗಲಾಟೆ ನಡೆಯುತ್ತಿದ್ದು ಚಾಸಾ-13 ನಾಗೇಶ್, ಸಿಹೆಚ್ ಸಿ 168 ರವರು ಹೋಗಿ ನೋಡುವಂತೆ ತಿಳಿಸಿರುತ್ತಾರೆಂದು ಹೇಳಿದ್ದು, ಆಗ ಚಾಸಾ-1 ಮಹದೇವಮೂರ್ತಿ.ಸಿ, ಸಿಪಿಸಿ 200 ರವರು ಚಾಸಾ-4 ಸುನೀಲ್, ಹೆಚ್.ಜಿ ರವರನ್ನು ಹಾಗೂ ಚಾಸಾ-2 ಕೃಷ್ಣ, ಸಿಪಿಸಿ 459 ರವರು ಚಾಸಾ-3 ಸಿದ್ದರಾಜು, ಹೆಚ್ ಜಿ-222 ರವರನ್ನು ಕರೆದುಕೊಂಡು ಅನುಪಮ ಬಾರ್ ಮುಂಭಾಗ ಹೋದಾಗ ಆರೋಪಿಗಳಾದ ನೀವು 1ನೇ ಆರೋಪಿಯಾದ ನಿಮ್ಮ ಬಾಬ್ತು ಕೆಎ-10-ಇಎಫ್-8247 ರ ರಾಯಲ್ ಎನ್ ಫೀಲ್ಡ್ ಬುಲೆಟ್ ನ ಬಳಿ ನಿಂತಿದ್ದು, ಚಾಸಾ-6 ನಟರಾಜು ಮತ್ತು ಚಾಸಾ-7 ಚಂದ್ರಶೇಖರ್ ರವರು ನಿಮ್ಮನ್ನು ತೋರಿಸಿದ್ದು, ಗಲಾಟೆ ಬಗ್ಗೆ ಕೇಳಲು ಬಂದ ಚಾಸಾ-1 ಮಹದೇವಮೂರ್ತಿ.ಸಿ, ಸಿಪಿಸಿ 200 ರವರಿಗೆ 1ನೇ ಆರೋಪಿಯಾದ ನೀವು ಏಕಾಏಕಿ ಪೊಲೀಸ್ ಸೂಳೇ ಮಕ್ಕಳು, ಗಾಂಡುಗಳು ಏಕೆ ಇಲ್ಲಿ ಬಂದಿದ್ದೀರಾ ಎಂದು ಅವಾಚ್ಯವಾಗಿ ಬೈಯ್ಯುತ್ತಿದ್ದು, ನಾವು ಪೊಲೀಸರು ಬಾರ್ ನಲ್ಲಿ ಗಲಾಟೆ ಆಗುತ್ತಿದೆ ಎಂದು ಮಾಹಿತಿ ಬಂದಿದೆ, ಆದ್ದರಿಂದ ಬಂದಿದ್ದೇವೆ, ನೀನು ಸುಮ್ಮನೇ ಗಲಾಟೆ ಮಾಡದೇ ಮನೆಗೆ

ಹೋಗಿ ಮಲಗಿಕೋ ಎಂದು ತಿಳಿಸಿದರೂ ಸಮವಸ್ತ್ರ ಧರಿಸಿ ಕರ್ತವ್ಯದಲಿದ್ದ ಚಾಸಾ-1 ಮಹದೇವಮೂರ್ತಿ.ಸಿ, ಸಿಪಿಸಿ 200 ರವರನ್ನು ಬೋಳಿಮಗನೇ ನೀನು ಯಾವ ಪೊಲೀಸೋ, ಪೊಲೀಸ್ ನವರು ಗಾಂಡು ಸೂಳೇ ಮಕ್ಕಳು ಎಂದು ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿರುತ್ತೀರೆಂದು ಆ ಮೂಲಕ ಭಾರತೀಯ ನ್ಯಾಯಾ ಸಂಹಿತಾ ಕಲಂ 352 ಸಹವಾಚಕ 3(5) ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಎರಡನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ಮಹದೇವಮೂರ್ತಿ.ಸಿ, ಸಿಪಿಸಿ 200 ರವರ ಜೊತೆ ಜಗಳ ತೆಗೆದು ಗಲಾಟೆ ಮಾಡಿ ನಿಮ್ಮಗಳ ಪೈಕಿ 1 ನೇ ಆರೋಪಿಯಾದ ನೀವು ಚಾಸಾ-1 ಮಹದೇವಮೂರ್ತಿ.ಸಿ, ಸಿಪಿಸಿ 200 ರವರ ಕುತ್ತಿಗೆ ಪಟ್ಟಿಯನ್ನು ಹಿಡಿದು ಮುಂದೆ ಹೋಗದಂತೆ ತಡೆದಿರುತ್ತೀರೆಂದು ಆ ಮೂಲಕ ಭಾರತೀಯ ನ್ಯಾಯಾ ಸಂಹಿತಾ ಕಲಂ 126(2) ಸಹವಾಚಕ 3(5) ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಮೂರನೇಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ಮಹದೇವಮೂರ್ತಿ.ಸಿ, ಸಿಪಿಸಿ 200 ರವರ ಜೊತೆ ಜಗಳ ತೆಗೆದು ಗಲಾಟೆ ಮಾಡಿ ನಿಮ್ಮಗಳ ಪೈಕಿ 1 ನೇ ಆರೋಪಿಯಾದ ನೀವು ನಿಮ್ಮ ಬಲಗೈಯಿಂದ ಚಾಸಾ-1 ಮಹದೇವಮೂರ್ತಿ.ಸಿ, ಸಿಪಿಸಿ 200 ರವರ ಎಡಗಣ್ಣಿನ ಉಬ್ಬಿಗೆ ಜೋರಾಗಿ ಗುದ್ದಿ ರಕ್ತಗಾಯ ಮಾಡಿರುತ್ತೀರೆಂದು ಹಾಗೂ ಚಾಸಾ-1 ಮಹದೇವಮೂರ್ತಿ.ಸಿ, ಸಿಪಿಸಿ 200 ರವರು ನಾವು ಪೊಲೀಸರು ಎಂದು ಎಷ್ಟೇ ಹೇಳಿದರೂ ಕೂಡ 1ನೇ ಆರೋಪಿಯಾದ ನೀವು ಸೂಳೇ ಮಕ್ಕಳೇ ಪೊಲೀಸರು ಏನು ಕಿತ್ತುಕೊಳ್ಳುತ್ತೀರಾ ಎಂದು ಚಾಸಾ-1 ಮಹದೇವಮೂರ್ತಿ.ಸಿ, ಸಿಪಿಸಿ 200 ರವರ ಬಲಗೆನ್ನೆಗೆ ಗುದ್ದಿ ಗಾಯವನ್ನುಂಟು ಮಾಡಿ ಎಳೆದಾಡುತ್ತಿದ್ದಾಗ ಚಾಸಾ-2 ಕೃಷ್ಣ, ಸಿಪಿಸಿ 459 ರವರು ಬಿಡಿಸಲು ಬಂದಾಗ ಪಕ್ಕದಲ್ಲಿಯೆ ಇದ್ದ 2ನೇ ಆರೋಪಿಯಾದ ನೀವು ಚಾಸಾ-2 ಕೃಷ್ಣ, ಸಿಪಿಸಿ 459 ರವರ ಬೆನ್ನಿಗೆ ಕೈಯಿಂದ ಹೊಡೆದು ಹಲ್ಲೆ ಮಾಡಿ ಚಾಸಾ-2 ರವರ ಬಲತೋಳಿಗೆ ಜೋರಾಗಿ ಕೈಯಿಂದ ಗುದ್ದಿ ನೋವುಂಟು ಮಾಡಿರುತ್ತೀರೆಂದು ಆ ಮೂಲಕ ಭಾರತೀಯ ನ್ಯಾಯಾ ಸಂಹಿತಾ ಕಲಂ 121(1) ಸಹವಾಚಕ 3(5) ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ನಾಲ್ಕನೇಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರ ಜೊತೆ ಜಗಳ ತೆಗೆದು ಗಲಾಟೆ ಮಾಡಿ ಪೊಲೀಸ್ ಸಿಬ್ಬಂದಿಗಳು ಎಂದು ತಿಳಿಸಿದರೂ ಕೂಡ ಸಮವಸ್ತ್ರದ ಮೇಲೆ ಇದ್ದ ಚಾಸಾ-1 ಮಹದೇವಮೂರ್ತಿ.ಸಿ, ಸಿಪಿಸಿ 200 ಮತ್ತು ಚಾಸಾ-2 ಕೃಷ್ಣ, ಸಿಪಿಸಿ 459 ರವರ ಮೇಲೆ ಗಲಾಟೆ ಮಾಡಿ ಅವರ ಕರ್ತವ್ಯಕ್ಕೆ

ಅಡ್ಡಿಪಡಿಸಿರುತ್ತೀರೆಂದು ಆ ಮೂಲಕ ಭಾರತೀಯ ನ್ಯಾಯಾ ಸಂಹಿತಾ ಕಲಂ **132** ಸಹವಾಚಕ **3(5)** ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಮೇಲ್ಕಂಡ ಅಪಾದನೆಗಳನ್ನು ನೀವು ಈ ನ್ಯಾಯಾಲಯದ ಸಂಜ್ಞಾದೊಳಗೆ ಎಸಗಿರುವುದಾಗಿ ಈ ನ್ಯಾಯಾಲಯದ ವಿಚಾರಣೆಗೆ ಒಳಪಟ್ಟಿರುವುದಾಗಿ ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 06.02.2026

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ
ಗುಂಡ್ಲುಪೇಟೆ